(ಶ್ರೀ ಜಿ. ಪುಟ್ಟಸ್ವಾಮಿ.)

ವೇತನಕ್ಕೆ ಗ್ರಾಂಟು ಹೆಚ್ಚಿಸುತ್ತೀವೆ ಎಂದು ಭರವಸೆ ಕೊಟ್ಟಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳಿರಲಿಲ್ಲ, ಪರ್ಯಾಲೋಚಿಸುತ್ತೀವೆಂದು ಹೇಳಿತ್ತು. ಪರ್ಯಾಲೋಚನೆ ಮಾಡಲಾಯಿತು. ಈ ವರ್ಷ ಹೋದವರ್ಷಕ್ಕಿಂತ ಬಡ್ಜೆಟ್ಟಿನಲ್ಲಿ ಖೋತಾ ಜಾಸ್ತಿಯಾದ್ದರಿಂದ ಹೆಚ್ಚಿಸುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಗ್ರಾಂಟು ಕಡಮೆಯಾಗಿರುವುದರಿಂದ ಬಹಳ ಜನರು ವಿದ್ಯಾಭ್ಯಾಸ ಮಾಡುವುದನ್ನೇ ನಿಲ್ಲಿಸಿದ್ದಾರೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕಾರಣದಿಂದ ನಿಲ್ಲಿಸಿದ್ದಾರೆಂಬುದು ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಡಿಪ್ರೆಸ್ಡ್ ಕ್ಲಾಸ್ ಸಮಿತಿಯವರು ಮತ್ತು ಪಾಲಸಿ ಸಮಿತಿಯವರು ಈ ಗ್ರಾಂಟು ಸಾಲದು, ಹೆಚ್ಚಾಗಿ ಕೊಡಬೇಕು ಎಂದು ಶಿಫಾರ್ಸು ಮಾಡಿದ್ದಾರೆಯೆ ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಈಗ ಬಂದಿರುವ ಅರ್ಜಿಗಳೆಷ್ಟು, ಎಷ್ಟು ಹಣವಿದೆ, ಎಷ್ಟು ಜನರಿಗೆ ಸಿಕ್ಕುತ್ತದೆ ಯಾವ ರೀತಿಯೋ ಪ್ರಕಾರ ಸಿಕ್ಕುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಅಂಕಿಅಂಶ ಒದಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈಗಿರುವ ಗ್ರಾಂಟನ್ನು ಯಾವ ವರ್ಷ ನಿಗದಿಮಾಡಲಾಯ್ತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ವರ್ಷಗಳಿಂದ ಈ ಗ್ರಾಂಟನ್ನು ಇದೇ ರೀತಿ ಕೊಡುತ್ತಿದೆಯೆಂದು ಹೇಳಿದೆ.

ಶ್ರೀ ಕೆ. ಪ್ರಭಾಕರ್.—ಮೊದಲನೆಯ ಸಲ ಯಾವ ವರ್ಷ ಇದನ್ನು ಗೊತ್ತು ಮಾಡಲಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ವೇತನವನ್ನು ವಿಶ್ವವಿದ್ಯಾನಿಲಯಕ್ಕೂ ಮತ್ತು ಇತರ ವಿದ್ಯಾ ಸಂಸ್ಥೆಗಳಿಗೂ ಬೇರೆಬೇರೆ ನಿಗದಿ ಮಾಡಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ವರ್ಷೇವರ್ಷೇ ವಿಶ್ವವಿದ್ಯಾನಿಲಯದಲ್ಲಿ ಈ ಹಣ ಲ್ಯಾಪ್ಸ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಹೋದ ವರ್ಷ ಹಣ ಉಳಿಯಿತು. ಆ ಹಣವನ್ನು ಅದಕ್ಕೇ ಉಪಯೋಗಿಸಬೇಕೆಂದು ಪ್ರಯತ್ನ ಮಾಡಲಾಯಿತು. ಆದರೆ ಖೋತ ಬಡ್ಜೆಟ್ ಹೆಚ್ಚಿದ್ದರಿಂದ ಅದಕ್ಕೆ ಸೂಕ್ತತೆ ಕಾಣಲಿಲ್ಲ. ಆದ್ದರಿಂದ ನಿಲ್ಲಿಸಿದೆ.

ಶ್ರೀ ಟಿ. ಹನುಮಯ್ಯ.—ಮೇಜರ್ ಮತ್ತು ಮೈನರ್ ಕಮ್ಯೂನಿಟಿಗಳಿಗೆ ಯಾವ ದಾಮಾಷಾ ಪ್ರಕಾರ ಅಲಾಟ್ ಮಾಡಲಾಗುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ವಿಂಗಡಿಸಿಲ್ಲ; ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಡಿಪ್ರೆಸ್ಡ್ ಕ್ಲಾಸ್ ಎಂದು ವಿಂಗಡಿಸಿ ಹಂಚುತ್ತಿದೆ.

Schools started in Rural Parts.

Q.—471. **Sri D. R. KARI GOWDA** (Hassan).—

Will the Government be pleased to state :—

(*a*) the number of primary schools newly sanctioned in rural parts in the State during the year 1954-55 ; the number of middle schools, and the number of high schools ;

(*b*) the number in each district ?

A.—**Sri A. G. RAMACHANDRA RAO** (Minister for Law and Education).—

(*a*) Primary Schools ... Nil
Middle Schools ... 4
High Schools ... 2

(*b*)—

	Bangalore District.	*Chikmagalur District.*	*Shimoga District.*
Primary Schools ...	Nil	Nil	Nil
Middle Schools ...	1	2	1
High Schools ...	1	Nil	1

ಶ್ರೀ ಡಿ. ಆರ್. ಕರಿಗೌಡ.—ಕೇವಲ 4 ಮಾತ್ರ ಮಾಧ್ಯಮಿಕ ಶಾಲೆಗಳನ್ನು ಸಂಸ್ಥಾನಾ ಮಳೆ ಕೊಟ್ಟಿದೆ. ಬೇರೆ ಯಾವ ಜಿಲ್ಲೆಯವರೂ ಮಾಧ್ಯಮಿಕ ಶಾಲೆಗಳನ್ನು ಕೇಳಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದಾರೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಅವರಿಗೇಕೆ ಕೊಟ್ಟಿರುವುದಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರ್ಥಿಕ ಮುಗ್ಗಟ್ಟಿನಿಂದ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಮುಂದೆ ಆರ್ಥಿಕ ಮುಗ್ಗಟ್ಟು ಹೀಗೇ ಇದ್ದರೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡುವುದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಸೂಕ್ತ ಪರಿಹಾರವನ್ನು ಸಾರ್ವಜನಿಕರೂ, ಸರ್ಕಾರದವರೂ ಸೇರಿ ಕಂಡುಹಿಡಿಯಬೇಕು.

ಶ್ರೀ ಡಿ. ಆರ್. ಕರಿಗೌಡ.—ಈಗ ನ್ಯೂ ಟೈಪ್ ಮಿಡ್ಲ್ ಸ್ಕೂಲುಗಳನ್ನು ಕೊಡುವುದನ್ನು ನಿಲ್ಲಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಿದರೆ ಕೊಡುತ್ತಿಲ್ಲ ಎಂಬುದು ತಮಗೇ ಅರ್ಥವಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಪ್ರೈಮರಿ ಸ್ಕೂಲುಗಳು ಹಾಸನ ಜಿಲ್ಲೆಗೆ ಹೆಚ್ಚಾಗಿ ಬೇಕೆಂದು ಅರ್ಜಿಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿವೆ, ಅದರ ಪ್ರಕಾರ ಅವಶ್ಯಕತೆಯಿದೆಯೆಂದು ಗೊತ್ತಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಆರ್ಥಿಕ ಮುಗ್ಗಟ್ಟಿರುವುದರಿಂದ ಪ್ರೈಮರಿ ಸ್ಕೂಲು ಕೊಡಬಾರದೆಂದು ಯೋಚಿಸಿದ್ದೀರಾ ?

ಶ್ರೀ ಎ. ಜಿ ರಾಮಚಂದ್ರರಾವ್.—ಕೊಡಬಾರದೆಂದಿಲ್ಲ, ಕೊಡುವುದಕ್ಕಾಗಿಲ್ಲವೆಂದು ಬಹಳ ವಿಷಾದವಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲ ಒದಗಿಸುವುದು ರಾಜ್ಯಾಂಗದ ಪ್ರಕಾರ ತಮ್ಮ ಕರ್ತವ್ಯವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಡಿ. ಆರ್. ಕರಿಗೌಡ.—ಆದ್ದರಿಂದ ಯಾವು ದಾದರೂ ಒಂದು ರೀತಿಯಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಾಯ ನೀಡುವುದು ಕರ್ತವ್ಯವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಸಲಹೆ ಕೊಟ್ಟರೆ ಖಂಡಿತ ಪರಿಶೀಲಿಸುತ್ತೇವೆ.

ಶ್ರೀ ವಿ. ಮಸಿಯಪ್ಪ.—ಕಳೆದ ಸಭೆಯಲ್ಲಿ ಚಳ್ಳಕೆರೆ ತಾಲ್ಲೂಕು ತಿಮ್ಮಯ್ಯನಹಳ್ಳಿಗೆ ಒಂದು ಮಿಡ್ಲ್ ಸ್ಕೂಲು ಕೊಡುತ್ತೇವೆಂದು ಭರವಸೆ ಕೊಟ್ಟಿರಲಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಟ್ಟಿತ್ತು.

ಶ್ರೀ ವಿ. ಮಸಿಯಪ್ಪ.—ಹಾಗಾದರೆ ಈ ಸಾಲಿನಲ್ಲಿ ಏಕೆ ಮಂಜೂರು ಮಾಡಲಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಮುಗ್ಗಟ್ಟು ಎಂದು ಆಗಲೇ ಹೇಳಿದೆ, ಸಾಧ್ಯವಾದರೆ ಈಗಲೂ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಮುಂದಿನ ಸಾಲಿನಲ್ಲಾದರೂ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯತ್ನ ಮಾಡುತ್ತೇವೆ.

Sri J. MOHAMED IMAM.—Have you not provided increased amount for education?

Sri A. G. RAMACHANDRA RAO.—Yes; slight increase.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಬಾಬಿನಲ್ಲಿ 35 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಒದಗಿಸಿರುವುದು ನಿಜವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಖಚಿತವಾದ ಅಂಕಿ ಅಂಶ ಈಗ ನನ್ನಲ್ಲಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಇದನ್ನು ಯಾವ ಕಡೆ ಡೈವರ್ಟ್ ಮಾಡಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಟೆಕ್ನಿಕಲ್ ಎಜುಕೇಷನ್ನಿಗೆ ಹೆಚ್ಚು ಗಮನ ಕೊಡಬೇಕಾಗಿದೆ, ಅದಕ್ಕೆ ಕೊಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಟೆಕ್ನಿಕಲ್ ಎಜುಕೇಷ್ನ ಮತ್ತು ಪ್ರೈಮರಿ ವಿದ್ಯಾಭ್ಯಾಸ ಇವೆರಡರಲ್ಲಿ ಯಾವುದು ಮುಖ್ಯವಾದುದು?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡೂ ಮುಖ್ಯ. ಇದರಲ್ಲಿ ಪ್ರೈಮರಿ ವಿದ್ಯಾಭ್ಯಾಸ ಬಹಳ ಮುಖ್ಯವಾದುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ರೈಮರಿ ವಿದ್ಯಾಭ್ಯಾಸವನ್ನು ವಿಸ್ತರಿಸುವ ಆವಶ್ಯಕತೆಯಿಲ್ಲ ವೆಂಬುದು ತಮ್ಮ ಅಭಿಪ್ರಾಯವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲ, ಅದು ಹೆಚ್ಚಾಗಬೇಕೆಂಬುದು ನಮ್ಮ ಅಭಿಪ್ರಾಯ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ರೀತಿ ಆರ್ಥಿಕ ಮುಗ್ಗಟ್ಟು ಹೆಚ್ಚುತ್ತಾ ಇರುವಾಗ ರಾಜ್ಯಾಂಗದ ಪ್ರಕಾರ ಉಚಿತವಾದ ಮತ್ತು ಒತ್ತಾಯವಾದ ವಿದ್ಯಾಭ್ಯಾಸ ಕೊಡಲು ಹೇಗೆ ಯೋಚನೆಮಾಡಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸಮಸ್ಯೆ ಇಡೀ ಹಿಂದೂಸ್ಥಾನದ ಸಮಸ್ಯೆಯಾಗಿರುವುದರಿಂದ ಕೇಂದ್ರ ಸರ್ಕಾರದೊಡನೆ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಕೇಂದ್ರ ಸರ್ಕಾರದಿಂದ ಪ್ರೈಮರಿ ವಿದ್ಯಾಭ್ಯಾಸಕ್ಕೆ ಗ್ರಾಂಟು ಬರುವ ಸಂಭವವಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಚರ್ಚೆಯಾಗುತ್ತಿದೆ, ಇನ್ನೂ ಆ ವಿಚಾರದಲ್ಲಿ ನೂಚನೆ ಕೊಟ್ಟಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ತಮ್ಮ ವಿದ್ಯಾ ನುಧಾರಣೆ ನಮಿತಿ ಸಲಹೆ ಪ್ರಕಾರ ಬಹಳ ಹಣ ಬೇಕು. ಬರುವ ಹಣವೆಲ್ಲಾ ನುಧಾರಣೆಗೇ ಆದರೆ ಪ್ರೈಮರಿ ವಿದ್ಯಾಭ್ಯಾಸ ವಿಸ್ತಾರವಾಗಲು ಧಕ್ಕೆ ಬರುವು ದಿಲ್ಲವೆ?

Sri A. G. RAMACHANDRA RAO.—It is a matter of opinion.

ಶ್ರೀ ಜೆ. ಮಹಮ್ಮದ್ ಇಮಾಂ.—ವಿದ್ಯಾ ನುಧಾರಣೆಯ ಪ್ರಕಾರ ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ, ಬೇಸಿಕ್ ವಿದ್ಯಾಭ್ಯಾಸಕ್ಕೆ ಮತ್ತು craft ವಿದ್ಯಾಭ್ಯಾಸಕ್ಕೆ ಹೆಚ್ಚಿಗೆ ಹಣ ಬೇಕಾಗಿರುವುದರಿಂದ ಪ್ರೈಮರಿ ವಿದ್ಯಾಭ್ಯಾಸ ಹಿಂದೆ ಬೀಳುವ ಸಂಭವವಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೆಲ್ಲಾ ಗಣನೆಗೆ ತೆಗೆದುಕೊಂಡೇ ವಿದ್ಯಾನುಧಾರಣಾ ನಮಿತಿಯವರು ಈ ರೀತಿ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಮೈಸೂರು ಸರ್ಕಾರದವರು ಹಿಂದೆ ವರ್ಷಕ್ಕೆ 400-500 ಪ್ರೈಮರಿ ಶಾಲೆಗಳನ್ನು ಮಂಜೂರು ಮಾಡುತ್ತಿದ್ದು ಈ ವರ್ಷ ನಂಸ್ಥಾನಾಮಿಳೆ ಒಂದೂ ಸಹ ಮಂಜೂರು ಮಾಡಿಲ್ಲ ದಿರುವುದು ಶೋಚನೀಯ ಪರಿಸ್ಥಿತಿಯಲ್ಲವೇ?

Mr. SPEAKER.—That is not a question. You do not require an answer for it.

Sri J. MOHAMED IMAM.—Of course it may touch the present Government.

Sri A. G. RAMACHANDRA RAO.—All right, let it touch. But it does not require an answer.

ಶ್ರೀ ಜೆ. ಮಹಮ್ಮದ್ ಇಮಾಂ.—ಹಿಂದೆ ಮೈಸೂರು ಸರ್ಕಾರದವರು ವರ್ಷಕ್ಕೆ 400 ಪ್ರೈಮರಿ ಸ್ಕೂಲು ಕೊಡುವ ಸಂಭವವಿದ್ದು ಈಗೇಕೆ ಇಷ್ಟೊಂದು ಅಭಾವದ ಉಗ್ರ ಪರಿಸ್ಥಿತಿ ಒದಗಿರುವುದು?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗ ಈಗಿನ ಹಾಗೆ ಡೆವಲಪ್‌ಮೆಂಟ್ ವರ್ಕ್ಸ್ ತೆಗೆದುಕೊಳ್ಳದೇ ಇರುವುದೇ ಒಂದು ಮುಖ್ಯ ಕಾರಣ.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ರೈಮರಿ ಸ್ಕೂಲು ಗಳನ್ನು ನಂಸ್ಥಾನದಲ್ಲಿ ಕೊಡದೇ ಇರುವುದೇ ಡೆವಲಪ್‌ಮೆಂಟ್ ವರ್ಕ್ಸ್ ಅಲ್ಲವೇ?

Sri A. G. RAMACHANDRA RAO.—I am sorry for the insinuation.

Sri J. MOHAMED IMAM.—It is no insinuation. But it is question of fact.

ಶ್ರೀ ಕೆ. ಲಕ್ಕಪ್ಪ.—ನಂಸ್ಥಾನದಲ್ಲಿ ಇತರ ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಪ್ರೈಮರಿ ಸ್ಕೂಲುಗಳನ್ನು ತೆಗೆಯುವುದನ್ನು ಒಂದು ಅಂಗವಾಗಿಟ್ಟುಕೊಂಡು ಮುಂದುವರಿಯುವುದು ನ್ಯಾಯವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಂದಾಜುಮಾಡಿಕೊಳ್ಳುವಾಗ ಇದನ್ನೂ ಗಮನದಲ್ಲಿಟ್ಟುಕೊಂಡು ಸಾಧ್ಯವಾದ ಮಟ್ಟಿಗೆ ಮಾಡಲು ಯೋಚಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಕೇವಲ ಏನೂ ಕೊಡದೆ ಇರುವುದಕ್ಕಿಂತ ಅವಶ್ಯಕವಾಗಿ ಬೇಕಾಗಿರುವ ಕಡೆ ಗಳಲ್ಲಿಯಾದರೂ ಇವುಗಳನ್ನು ತೆರೆಯಲು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಮುಗ್ಗಟ್ಟಿನಿಂದ ಈ ಬಗ್ಗೆ ನೂಕ್ತ ಕಾರ್ಯಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಇನ್ನು ಮುಂದೆ ಯೋಚಿಸಲಾಗುತ್ತದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹೋದವರ್ಷ ಪ್ರೈಮರಿ ಸ್ಕೂಲುಗಳು ಬೇಕೆಂದು ಸಂಸ್ಥಾನಾಮಳಿ ಎಷ್ಟು ಅರ್ಜಿಗಳು ಬಂದಿವೆಯೆಂಬುದನ್ನು ತಿಳಿಸ ಬಲ್ಲಿರಾ?

Sri A. G. RAMACHANDRA RAO.—I want notice for that.

ಶ್ರೀ ಬಿ. ಎಸ್. ಬೋರಣ್ಣಗೌಡ.—ಡೆವಲಪ್ ಮೆಂಟ್ ವರ್ಕ್ಸ್ ಸ್ಥಾಪನೆಮಾಡುವ ಪ್ರದೇಶಗಳಿಗೆ ಎಷ್ಟು ಪ್ರೈಮರಿ ಸ್ಕೂಲುಗಳನ್ನು ಕೊಟ್ಟಿರುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

Sri H. M. CHANNABASAPPA.—May I know the number of villages that are in need of primary schools in the State?

Sri A. G. RAMACHANDRA RAO.—Notice to give that answer.

Sri H. M. CHANNABASAPPA.—Government are not aware of it? At this rate, when are we to see that all places which are in need of primary schools are given the schools?

Mr. SPEAKER.—That does not require an answer.

ಶ್ರೀ ಟಿ. ಮರಿಯಪ್ಪ.—ವಿದ್ಯಾ ಸುಧಾರಣಾ ವರದಿಯಲ್ಲಿ ಸಂಸ್ಥಾನದಲ್ಲಿ ಐದು ಸಾವಿರ ಪ್ರೈಮರಿ ಸ್ಕೂಲುಗಳ ಅಗತ್ಯವಿದೆ ಎಂದು ನಮೂದಾಗಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಿದೆ.

ಶ್ರೀ ಟಿ. ಮರಿಯಪ್ಪ.—ಅದನ್ನು ಒಂದು planned basis ಮೇಲೆ ಪ್ರಾರಂಭಿಸಬೇಕೆಂದು ಅದರಲ್ಲಿ ಸಲಹೆ ಒಳಗೊಂಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ಟಿ. ಮರಿಯಪ್ಪ.—ಹೀಗಿರುವಲ್ಲಿ ಸಂಸ್ಥಾನ ದಲ್ಲಿ ಈ ವಿಚಾರದಲ್ಲಿ ಸ್ವಲ್ಪವೂ ಮುಂದುವರಿಯಲು ಅವಕಾಶವಿಲ್ಲದೆ ಇರುವಂಥ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಯಾವುದು?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಬಗ್ಗೆ ಡಿಫಿಸಿಟ್ ಬಜೆಟ್ ಸಂಸ್ಥಾನದಲ್ಲಿ ತಲೆದೋರಿ, ಅದು ಈ ಸಭೆಯಲ್ಲಿ ಅಂಗೀಕಾರವಾಗಿದೆ.

ಶ್ರೀ ವಿ. ವೆಂಕಟಪ್ಪ.—ಬೆಂಗಳೂರು ಡಿಸ್ಟ್ರಿಕ್ಟ್ ನಲ್ಲಿ ಅರಳಸಂದ್ರಕ್ಕೆ ಒಂದು ಹೈಸ್ಕೂಲು ಕೊಟ್ಟಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಟ್ಟಿದೆ.

ಶ್ರೀ ವಿ. ವೆಂಕಟಪ್ಪ.—ಒಂದು ಹೈಸ್ಕೂಲಿಗೆ ಕನಿಷ್ಠ ಪಕ್ಷ ಎಷ್ಟು ಮಂದಿ ಉಪಾಧ್ಯಾಯರುಗಳಿರ ಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ನಾಲ್ಕು ಮಂದಿಯಾದರೂ ಮೊದಲ ವರ್ಷ ಇರಬೇಕು.

ಶ್ರೀ ವಿ. ವೆಂಕಟಪ್ಪ.—ಈಗ ಈ ಹೈಸ್ಕೂಲಿನಲ್ಲಿ ಒಬ್ಬರೇ ಉಪಾಧ್ಯಾಯರಿದ್ದು ಎಲ್ಲ ತರಗತಿಗಳನ್ನೂ ನಡೆಸುತ್ತಿದ್ದಾರಲ್ಲವೇ?

Sri A. G. RAMACHANDRA RAO.—Yes; that is how it will begin.

Mr. SPEAKER.—We are not concerned with the administration of a particular school.

Nurses (Payment of Ration and Uniform Allowances during leave).

Q.—167. **Sri M. PALANIYAPPAN** (Ulsoor).—

Will the Government be pleased to state :—

whether nurses going on privilege or maternity leave are not allowed ration and uniform allowances?

A.—**Sri T. CHANNIAH** (Minister for Public Health and Local Self-Government).—

No; ration and uniform allowances are inadmissible during privilege or maternity leave.

Sri M. PALANIYAPPAN.—Under what Service Rules the nurses are governed?

Sri T. CHANNIAH.—Mysore Service Regulations.

Sri M. PALANIYAPPAN.—Is there any provision in the M.S.R. to grant them this privilege of uniform and ration allowances?

Sri T. CHANNIAH.—No. These allowances are admissible to them while on actual duty and not during privilege leave or maternity leave.

Sri M. PALANIYAPPAN.—Is any substitute posted if required on occasions?

Sri T. CHANNIAH.—Substitutes will be posted when necessary.

Sri M. PALANIYAPPAN.—They are expected to work from morning till night . . . .

Mr. SPEAKER.—This question refers to the grant of the allowances during privilege or maternity leave. Next question.

Plague at Agaram Village, Mulbagal Taluk.

Q.—245. **Sri G. NARAYANA GOWDA** (Mulbagal-Srinivaspur).—